ಸಿ.ಸಿ .ನಂ.159/2022		ಪಿಡಬ್ಲೂಃ 1

ದಿನಾಂಕಃ 23-07-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿಯ ಪರವಾಗಿಃ ಶ್ರೀ ಪಿ ಎಸ್ ಎನ್ ವಕೀಲರಿಂದಃ**

5. ಒಂದು ವಾಹವನ್ನು ಅಡವಿಟ್ಟು ಸಾಲವನ್ನು ಪಡೆಯುವಾಗ ಅರ್ಜಿ ಪರಿಶೀಲನೆಗೆ ನಮ್ಮ ಬ್ಯಾಂಕಿಗೆ ಒಬ್ಬರು ಸಿಬ್ಬಂದಿ ಇರುತ್ತಾರೆ ಎಂದರೆ ಸರಿ . ವಾಹನದ ವ್ಯಾಲುವೇಶನ್ ಮಾಡಿಸುತ್ತೇವೆ . ಅರ್ಜಿಯ ಪರಿಶೀಲನೆ, ಆರ್ ಟಿ ಓರವರಿಂದ ವ್ಯಾಲುವೇಶನ್ ಪಡೆಯುವ ಈ ಎಲ್ಲಾ ಪ್ರಕ್ರಿಯೆಗಳಿಗೆ 2-3 ದಿನಗಳ ಸಮಯ ಬೇಕಾಗುತ್ತದೆ. ವ್ಯಾಲುವೇಶನ್ ನ 50 ರಿಂದ 60 ರಷ್ಟು ಪರ್ಸೆಂಟ್ ಸಾಲವನ್ನು ಕೊಡುತ್ತೇವೆ . ಆ ವ್ಯಕ್ತಿಯ ಹೆಸರಿನಲ್ಲಿಯೇ ವಾಹನ ಇದೆ ಎಂಬುದನ್ನು ಖಚಿತ ಪಡಿಸಿಕೊಳ್ಳಲು ದಾಖಲಾತಿಗಳನ್ನು ಪಡೆದುಕೊಳ್ಳುತ್ತೇವೆ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಎಲ್ಲಾ ದಾಖಲಾತಿಗಳನ್ನು ಪಡೆದುಕೊಂಡಿರುತ್ತೇವೆ . ಆರ್ ಟಿ ಓ ರವರು ಎಷ್ಟು ವ್ಯಾಲುವೇಶನ್ ಕೊಟ್ಟಿದ್ದಾರೆ ದಾಖಲಾತಿ ನೋಡಿ ಹೇಳಬೇಕು . ಹೆಡ್ ಆಫೀಸಿನಲ್ಲಿರುವ ದಾಖಲಾತಿಯನ್ನು ನೋಡಿ ಹೇಳಬೇಕು . ವಾಹನದ ವ್ಯಾಲುವೇಶನ್ ನ್ನು ಹೊನ್ನಾವರದ ಶಾಸ್ತ್ರಿ ಎಂಬುವವರಿಂದ ದಾಖಲಾತಿಯನ್ನು ಪಡೆದುಕೊಂಡಿದ್ದೇನೆ . ದಾಖಲಾತಿಯನ್ನು ಪಡೆದ ನಂತರ ಶಾಖಾ ವ್ಯವಸ್ಥಾಪಕರು ಸಾಲ ಕೊಡಬಹುದೋ ಕೊಡಬಾರದೋ ಎಂಬುದಕ್ಕೆ ಸಂಬಂಧಪಟ್ಟಂತೆ ಆಡಳಿತ ಮಂಡಳಿಯ ಮುಂದೆ ಅರ್ಜಿಯನ್ನು ಇಡುತ್ತಾರೆ ಎಂದರೆ ಸರಿ . ನಮ್ಮ ಬ್ಯಾಂಕಿನಲ್ಲಿ ಆಡಳಿತ ಮಂಡಳಿಯ ಸಭೆ ತಿಂಗಳಿಗೆ 2-3 ಬಾರಿ ನಡೆಯುತ್ತದೆ . ಈ ವಾಹನ ಆರೋಪಿಯ ಮಾಲೀಕತ್ವದಲ್ಲಿ ಇತ್ತು ಎಂದು ತೋರಿಸಲು ವಾಹನಕ್ಕೆ ಸಂಬಂಧಪಟ್ಟ ಎಲ್ಲಾ ದಾಖಲಾತಿಗಳನ್ನು ಪಡೆದುಕೊಂಡಿದ್ದೇನೆ. Auction ಆದಾಗ ವಾಹನದ ಮೂಲ ದಾಖಲಾತಿಗಳನ್ನು ಬೇರೆ ಪಾರ್ಟಿಗೆ ಕೊಟ್ಟಿರುತ್ತೇವೆ . ಅದರ ಪ್ರತಿ ನಮಗೆ ಇರಬಹುದು. ದಾಖಲಾತಿಗಳನ್ನು ಪಡೆದವರು ದಾಖಲಾತಿ ಪಡೆದ ಬಗ್ಗೆ ಸಹಿಯನ್ನು ಮಾಡಿರುತ್ತಾರೆ. ಆ ದಾಖಲಾತಿ ನಮ್ಮ ಶಾಖೆಯಲ್ಲಿ ಇರುತ್ತದೆ. ವಾಹನದ ಹರಾಜು ಯಾವ ದಿನಾಂಕದಂದು ನಡೆದಿದೆ ದಿನಾಂಕ ನೆನಪಿಲ್ಲ .

ವಾಹನವನ್ನು ಹರಾಜು ಮಾಡುವ ಮೊದಲು ನಾವು ವಾಹನವನ್ನು ಸೀಜ್ ಮಾಡಿದ್ದೇವೆ . ವಾಹನವನ್ನು ಸೀಜ್ ಮಾಡುವ ಸಂದರ್ಭದಲ್ಲಿ ಯಾರಿಂದ ವಾಹನವನ್ನು ಸೀಜ್ ಮಾಡುತ್ತೇವೆ ಅವರಿಗೆ ನೋಟಿಸನ್ನು ಕೊಡಬೇಕಾಗುತ್ತದೆ ಎಂದರೆ ಸರಿ . ಸೀಜ್ ಮಾಡಿದ ವಾಹನವನ್ನು Auction ಪ್ರಕ್ರಿಯೆ ಮಾಡುವ ಪೂರ್ವದಲ್ಲಿ ಅವರಿಗೆ ನೋಟಿಸನ್ನು ನೀಡಬೇಕಾಗುತ್ತದೆ ಎಂದರೆ ಸರಿ . ವಾಹನವನ್ನು ಸೀಜ್ ಮಾಡುವ ಸಂದದರ್ಭದಲ್ಲಿ Auction ಪ್ರಕ್ರಿಯೆ ಮಾಡುವ ಸಂದರ್ಭದಲ್ಲಿ ಅವರಿಗೆ ನಾವು ನೋಟಿಸನ್ನು ಕೊಟ್ಟಿದ್ದೇವೆ . Auction ಕರೆದಾಗ ವಾಹನ ದಿಲೀಪ ಅಂಬಿಗರವರ ಹೆಸರಿನಲ್ಲಿತ್ತು . Auction ನಲ್ಲಿ ಎಷ್ಟು ಜನ ಬೀಡ್ ದಾರರು ಭಾಗವಹಿಸಿದ್ದರು ನೋಡಿ ಹೇಳಬೇಕು. ವಾಹನ 3 ಲಕ್ಷ ರೂ.ಗಳಿಗೆ ಹರಾಜು ಆಗಿರುತ್ತದೆ. 3 ಲಕ್ಷ ರೂ.ಗಳಿಗೆ ಹರಾಜು ಆದ ಬಗ್ಗೆ ನಮ್ಮಲ್ಲಿ ದಾಖಲಾತಿಗಳು ಇವೆ . Auction ನಲ್ಲಿ ಎಷ್ಟು ಜನ ಭಾಗಿಯಾಗಿದ್ದರು ಎಷ್ಟು ಜನ ಬೀಡ್ ದಾರರು ಇದ್ದರು ಹಾಗೂ ವಾಹನ ಎಷ್ಟಕ್ಕೆ ಹರಾಜಾಯಿತು ಆ ಬಗ್ಗೆ ನಮ್ಮಲ್ಲಿ ದಾಖಲಾತಿಗಳು ಇವೆ . ಆ ಮೂರು ಲಕ್ಷ ಹಣವನ್ನು ಅವರ ಲೋನ್ ಖಾತೆಗೆ ಹಾಕಿರುತ್ತೇವೆ . ನಂತರ ಸಾಲದ ಬಾಕಿ ಬರತಕ್ಕಂತಹ ಹಣ ಎಷ್ಟಿತ್ತು ನೋಡಿ ಹೇಳಬೇಕು. ಯಾವ ದಿನಾಂಕಕ್ಕೆ ಆರೋಪಿಯ ಖಾತೆಗೆ ಹಣವನ್ನು ಹಾಕಿದ್ದೇವೆ ದಾಖಲಾತಿ ನೋಡಿ ಹೇಳಬೇಕು . ಯಾವ ದಿನಾಂಕದಂದು ಅವರ ಖಾತೆಗೆ ಹಾಕಿದ್ದೇವೆ ಆ ಅಕೌಂಟ್ ಸ್ಟೇಟ್ ಮೆಂಟನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಗೊತ್ತಿಲ್ಲ . ಈ ಪ್ರಕರಣ ದಾಖಲಾಗುವ ಎಷ್ಟು ದಿನಗಳ ಪೂರ್ವದಲ್ಲಿ ವಾಹನ ಹರಾಜಾಗಿತ್ತು ನೆನಪಿಲ್ಲ. ಹರಾಜು ಈ ಪ್ರಕರಣ ದಾಖಲಾಗುವ ಪೂರ್ವದಲ್ಲಿ ನಡೆದಿರುತ್ತದೆ. ಹರಾಉ ಬಗ್ಗೆ ಹಾಗೂ ಎಷ್ಟು ಹಣ ಬಂತು ಆ ಬಗ್ಗೆ ನಮ್ಮ ಫಿರ್ಯಾದಿನಲ್ಲಾಗಲೀ , ವಕೀಲರಿಂದ ಕೊಟ್ಟಿರುವ ನೋಟಿಸಿನಲ್ಲಾಗಲೀ, ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಾಗಲೀ ಹೇಳಿಲ್ಲ ಎಂದರೆ ಸರಿ . ಆ ಹಣ ಜಮಾ ಆಗಿದೆ ಎಂದು ಹೇಳುವ ಬಗ್ಗೆ ದಾಖಲಾತಿ ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿ ದಾಖಲಾತಿ ಇದೆ ಹಾಜರು ಪಡಿಸುತ್ತೇನೆ ಎಂದು ನುಡಿದಿರುತ್ತಾರೆ.

ಪಿಡಬ್ಲೂಃ 1

6. ನನ್ನ ಹಿಂದಿನ ಶಾಖಾ ವ್ಯವಸ್ಥಾಪಕರಾದ ಸುನೀಲರವರು ಈಗ ನಮ್ಮ ಶಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿಲ್ಲ ಎಂದರೆ ಸರಿ . ಅವರಿಗೆ ಮತ್ತು ಆಭರಣ ಸರಾಫ್ ರವರಿಗೆ ನಮ್ಮ ಹೆಡ್ ಆಫೀಸ್ ನವರು ಕರ್ತವ್ಯ ಲೋಪದ ಕುರಿತು ನೋಟಿಸನ್ನು ಕೊಟ್ಟಿದ್ದರು ಎಂದರೆ ಗೊತ್ತಿಲ್ಲ . ಕರ್ತವ್ಯ ಲೋಪ ಮತ್ತು ಹಣ ದುರ್ಬಳಕೆ ಬಗ್ಗೆ ನಿಮ್ಮ ಮೇಲೆ ಏಕೆ ಕ್ರಮ ಕೈಗೊಳ್ಳಬಾರದಂದು ನೋಟಿಸನ್ನು ಕೂಡ ಕೊಟ್ಟಿದ್ದರು ಎಂದರೆ ಗೊತ್ತಿಲ್ಲ. ಸಾಲ ಪಡೆದರೂ ಹಾಗೂ ವಾಹನ ಹರಾಜಾಯಿತು ಎಂದು ಹೇಳುವ ಸಂದರ್ಭದಲ್ಲಿ ಸುನೀಲರವರು ಶಾಖಾ ವ್ಯವಸ್ಥಾಪಕರು ಆಗಿದ್ದರು . ಸುನೀಲರವರು ರಾಜಿನಾಮೆ ನೀಡಿದ್ದಾರೆ , ಕಾರಣ ಅವರ ಸಾಕ್ಷಿ ವಿಚಾರಣೆಗೆ ಅವರು ಬರುತ್ತಾರೋ ಇಲ್ಲವೋ ಗೊತ್ತಿಲ್ಲ . ಒಂದು ಸಾಲದ ಅರ್ಜಿ ಬಂದಾಗ ಅದನ್ನು ಯಾರು ಸ್ವೀಕರಿಸುತ್ತಾರೆ ಅವರು ಸಹಿ ಹಾಗೂ ಶೀಲ್ ನ್ನು ಹಾಕಿ ತೆಗೆದುಕೊಳ್ಳುತ್ತಾರೆ ಎಂದರೆ ಸರಿ . ಈ ಪ್ರಕರಣದಲ್ಲಿ ಸಾಲದ ಅರ್ಜಿಯನ್ನು ಸುನೀಲರವರೇ ಸ್ವೀಕರಿಸಿರಬಹುದು . ಜಾಮೀನುದಾರರರ ಅರ್ಜಿಗೆ ಸೀಲು ಸಹಿ ಬರುವುದಿಲ್ಲ . ಅಂತಹ ದಾಖಲಾತಿಯನ್ನು ಪಡೆದುಕೊಂಡಿದ್ದೇವೋ ಇಲ್ಲವೋ ನೋಡಿ ಹೇಳಬೇಕು . ಜಾಮೀನು ಹಾಗೂ ಭದ್ರತೆ ಯಾರು ಪಡೆದಿರುತ್ತಾರೆ ಅವರ ಸಹಿ ಹಾಗೂ ಸೀಲು ಇರಬೇಕಾಗುತ್ತದೆ ಎಂದರೆ ಸರಿ . ಈ ಪ್ರಕರಣದಲ್ಲಿ ಅಂತಹ ದಾಖಲಾತಿಯನ್ನು ಪಡೆದಿದ್ದೇವೆ . ಅದನ್ನು ಸುನೀಲರವರೇ ಪಡೆದುಕೊಂಡಿದ್ದಾರೆ . ನಾವು ಹಾಜರು ಪಡಿಸಿದ ಸಾಲದ ಅರ್ಜಿಯಲ್ಲಿ ಯಾರು ಸಾಲದ ಅರ್ಜಿಯನ್ನು ಪಡೆದಿದ್ದಾರೆ ಅವರ ಸೀಲು ಮತ್ತು ಸಹಿ ಇಲ್ಲ ಎಂದರೆ ಸಾಕ್ಷಿ ಸಹಿ ಇದೆ ಎಂದು ನುಡಿದಿರುತ್ತಾರೆ. ಜಾಮೀನು ಹಾಗೂ ಪೂರಕ ಭದ್ರತೆಗೆ ಯಾರದೇ ಸೀಲು ಮತ್ತು ಸಹಿ ಇಲ್ಲ ಎಂದರೆ ಸಾಕ್ಷಿ ಅದರ ಮೇಲೆ ಸೀಲು ಸಹಿ ಬರುವುದಿಲ್ಲ ಎಂದು ನುಡಿದಿರುತ್ತಾರೆ . ಜಾಮೀನು ಪೂರಕ ಭದ್ರತೆ ಎಂದು ಏನು ಭದ್ರತೆಯಾಗಿ ನೀಡಿದ್ದಾರೆ ಬರೆಯಬೇಕು ಎಂದರೆ ಸರಿ . ಈ ಪ್ರಕರಣದಲ್ಲಿ ವಾಹನವನ್ನು ಭದ್ರತೆಗಾಗಿ ನೀಡಿದ್ದಾರೆ . ಸಾಲದ ಅರ್ಜಿಯಲ್ಲಿ ಬರದಿರುವ ಸಂಗತಿಗಳು ಸುಳ್ಳಾಗಿದ್ದರೆ ಅಂತಹ ಅರ್ಜಿ ಪುರಸ್ಕೃತಗೊಳ್ಳುವುದಿಲ್ಲ ಎಂದರೆ ಸರಿ . ಒಂದು ವಾಹನವನ್ನು ಅಡವು ಇಡಲು ಕೊಟ್ಟಾಗ ಪುನಃ ಅದೇ ವಾಹನವನ್ನು ಖರೀದಿಗಾಗಿ ಸಾಲ ಕೊಡುವುದಿಲ್ಲ .

ಪಿಡಬ್ಲೂಃ 1

(ಈ ಹಂತದಲ್ಲಿ ಆರೋಪಿ ಪರ ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.